

ಅಕ್ಷಯ ಕ್ಷೇತ್ರಂ ಸಂಸ್ಥಾಪಕರಾದ ವರಲಕ್ಷ್ಮಿ ಮತ್ತು ರಾಮಸ್ವಾಮಿ

# ಗಾಂಧಿತತ್ವಗಳ ದಾರಿಯಲ್ಲಿ

ಗಾಂಧಿ ತತ್ವಾದರ್ಶಗಳ ಪ್ರತಿಪಾದಕರಾಗಿದ್ದ ದಿವಂಗತ ಎಂ. ರಾಮಸ್ವಾಮಿ– ವರಲಕ್ಷ್ಮಿ ದಂಪತಿ 1996ರಲ್ಲಿ ತಿರುಪತಿ ಪಟ್ಟಣದಲ್ಲಿ ‘ಅಕ್ಷಯ ಕ್ಷೇತ್ರಂ’ ಆರಂಭಿಸಿದರು. ಮಹಿಳಾ ಸಬಲೀಕರಣ, ಸಮಾನತೆ ಹಾಗೂ ಒಳಗೊಳ್ಳುವಿಕೆ ಎಂಬ ಗಾಂಧಿ ತತ್ವಗಳ ಮೇಲೆ ನಡೆಯುತ್ತಿರುವ ಕೇಂದ್ರವಿದು.

ಮಾನಸಿಕ ಅಸ್ವಸ್ಥ ಮಹಿಳೆಯರ ಆರೈಕೆಯ ಉದ್ದೇಶದೊಂದಿಗೆ ಬಾಡಿಗೆ ಮನೆಯೊಂದರಲ್ಲಿ ಇಬ್ಬರು ಮೂವರು ಮಹಿಳೆಯರ ಆರೈಕೆಯೊಂದಿಗೆ ಆರಂಭವಾದ ಅಕ್ಷಯ ಕ್ಷೇತ್ರದ ಸೇವಾ ಕಾರ್ಯ ವಿಸ್ತಾರಗೊಂಡಿತು. ಜನರಿಂದ ಜನರಿಗೆ ತಲುಪಿತು. ಆರೈಕೆ ಬಯಸಿ ಬರುವವರ ಸಂಖ್ಯೆ ಹೆಚ್ಚಿತು. ನಂತರ ವಿದೇಶದಲ್ಲಿದ್ದ ಬಂಧುವೊಬ್ಬರ ನೆರವಿನಿಂದ ತಿರುಪತಿಯ ಹೊರವಲಯದ ದುರ್ಗಸಮುದ್ರಂನಲ್ಲಿ ಎರಡು ಎಕರೆ ಜಾಗ ಖರೀದಿಸಿ ಕಟ್ಟಡ ನಿರ್ಮಾಣವಾಯಿತು. ದಾನಿಗಳ ನೆರವಿನಿಂದ ನಿವಾಸಿಗಳ ಆರೈಕೆಗೆ ಅಗತ್ಯ ಸೌಲಭ್ಯಗಳು ದೊರೆತವು.

ಮೂವರು ನಿವಾಸಿಗಳಿಂದ ಆರಂಭವಾದ ಈ ಕೇಂದ್ರದಲ್ಲಿ ಈಗ 55 ಮಹಿಳೆಯರು ಆಶ್ರಯ ಪಡೆದಿದ್ದಾರೆ. ಆಶ್ರಮದಲ್ಲಿನ ಬದ್ಧತೆ–ಸೇವೆಯ ಕಾರಣಕ್ಕಾಗಿ, ಮಹಿಳಾ ಆರೈಕೆ ಕೇಂದ್ರದ ಜೊತೆಗೆ, ಕೆಲವು ವರ್ಷಗಳ ನಂತರ ರೇಣಿಗುಂಟ ಎಂಬಲ್ಲಿ ಇದೇ ರೀತಿ ಪುರುಷರ ಆರೈಕೆ ಕೇಂದ್ರವೂ ಆರಂಭವಾಗಿದೆ. ಅಲ್ಲಿಯೂ ಸುಮಾರು 45 ಮಂದಿ ಆಶ್ರಯ ಪಡೆದಿದ್ದಾರೆ. ಎರಡು ಕೇಂದ್ರಗಳಲ್ಲಿ ಒಟ್ಟು 100 ಮಂದಿ ಆಶ್ರಯ ಪಡೆದಿದ್ದು, ಅದರಲ್ಲಿ 30 ಮಂದಿ ಅನಾಥರಿದ್ದಾರೆ.

ಪ್ರತಿಷ್ಠಾನ ಸ್ಥಾಪಿಸಿ, ಆಶ್ರಮ ಆರಂಭಿಸಿ ಎರಡು ದಶಕಗಳ ಕಾಲ, ದುರ್ಬಲ ವರ್ಗದವರ ಆರೈಕೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದ ರಾಮಸ್ವಾಮಿ–ವರಲಕ್ಷ್ಮಿ ಇಬ್ಬರೂ 2019ರಲ್ಲಿ ಕೆಲವು ತಿಂಗಳುಗಳ ಅಂತರದಲ್ಲಿ ನಿಧನರಾದರು. ನಂತರ ಲಂಡನ್‌ನಲ್ಲಿ ಐ.ಟಿ. ಕಂಪನಿ ಉದ್ಯೋಗಿಯಾಗಿದ್ದ ಅವರ ಏಕೈಕ ಪುತ್ರಿ ಲಾವಣ್ಯ, ತನ್ನ ತಂದೆಯ ಸೇವಾ ಕಾರ್ಯವನ್ನು ಮುಂದುವರೆಸುತ್ತಿದ್ದಾರೆ. ದೂರದ ಲಂಡನ್‌ನಲ್ಲಿಯೇ ಕುಳಿತು, ಜೂಮ್ ಮೀಟಿಂಗ್‌ನಂತಹ ಆಧುನಿಕ ಸಂವಹನ ತಂತ್ರಜ್ಞಾನಗಳೊಂದಿಗೆ ಸೇವಾಕಾರ್ಯ ನಡೆಸುತ್ತಾರೆ.

‘ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುವ ಹೆಣ್ಣುಮಕ್ಕಳಿಗೆ (ಹದಿವಯಸ್ಸಿನ ಹೆಣ್ಣು ಮಕ್ಕಳು) ಆಶ್ರಯ ನೀಡುವ, ಆರೈಕೆ ಮಾಡುವ ಕೇಂದ್ರಗಳು ಬಹಳ ವಿರಳ. ಸಮಾಜದಲ್ಲಿ ಮಾನಸಿಕ ಅಸ್ವಸ್ಥತೆ ಎಂಬುದು ಒಂದು ಪಿಡುಗಾಗಿದೆ. ಇದನ್ನು ಹೋಗಲಾಡಿಸುವುದಕ್ಕಾಗಿಯೇ ನಮ್ಮ ತಂದೆ ಈ ಅಕ್ಷಯ ಕ್ಷೇತ್ರಂ ಆರಂಭಿಸಿದರು’ ಎನ್ನುತ್ತಾರೆ ಆಶ್ರಮದ ಅಧ್ಯಕ್ಷೆ ಲಾವಣ್ಯ.

ಆಶ್ರಮದ ಸೇವಾಕಾರ್ಯಗಳನ್ನು ನೋಡಿಕೊಳ್ಳುವ ಲಾವಣ್ಯ ಅವರಿಗೆ ಪತಿ ಗೋಪಾಲ್ ರಾವ್ ಬೆಂಬಲವಾಗಿದ್ದಾರೆ. ಈ ದಂಪತಿಯೊಂದಿಗೆ ಮುಂಬೈನ ತುರುಗ ಕಾಮರಾಜು (ಅಕ್ಷಯ ಕ್ಷೇತ್ರಂ ಪ್ರತಿಷ್ಠಾನದ ಕಾರ್ಯದರ್ಶಿ), ಬೆಂಗಳೂರಿನ ಸತ್ಯಪ್ರಸಾದ್–ಅರುಣಾ ದಂಪತಿಯಂತಹ ಹಲವು ಹಿತೈಷಿಗಳು, ಬಂಧುಗಳು ಜತೆಯಾಗಿದ್ದಾರೆ. ತಿರುಪತಿ ತಿರುಮಲ ದೇವಸ್ಥಾನ ಸಮಿತಿ ಆಶ್ರಮದ ಕಾರ್ಯಗಳಿಗೆ ಕೈ ಜೋಡಿಸಿದೆ.

ವಿವಿಧ ಆಟಗಳು, ವಿವಿಧ ವ್ಯಾಯಾಮಗಳ ಮೂಲಕ, ಕೆಲವರಿಗೆ ಪಾಠಗಳ ಮೂಲಕವೂ ಮಾನಸಿಕ ವ್ಯಾಧಿ ಗುಣಪಡಿಸಲು ಪ್ರಯತ್ನಿಸಲಾಗುತ್ತಿದೆ. ಇದಕ್ಕೆಂದೇ ನುರಿತ ಸಿಬ್ಬಂದಿಯಿದ್ದಾರೆ. ಕೈಲಾಗದವರಿಗೆ ಉಣಿಸಿ–ತಿನ್ನಿಸುತ್ತಾ, ರಮಿಸುತ್ತಾ ಅಮ್ಮನಂತೆ ಪ್ರೀತಿ ತೋರುವ ತಾಯಂದಿರಿದ್ದಾರೆ. ಆರೋಗ್ಯ ರಕ್ಷಣೆಗೆ ಬುಜ್ಜಿಯಂತಹ ನರ್ಸ್‌ಗಳಿದ್ದಾರೆ. ಕೆಲವರಿಗೆ ನಿತ್ಯ ಸ್ನಾನ–ಶೌಚದಂತಹ ಕರ್ಮಗಳಿಗೆ ನೆರವಾಗುವ ದಾದಿಯರಿದ್ದಾರೆ. ಯೋಗ, ಧ್ಯಾನ ಕೌಶಲ ಕಲಿಸುವುದಕ್ಕೆ ಶೈಲಜಾರಂತಹ ಶಿಕ್ಷಕ/ ಶಿಕ್ಷಕಿಯರಿದ್ದಾರೆ.

ಔಷಧಿಗಳು, ಚಿಕಿತ್ಸೆ ನೀಡುವ ಸಮಯ, ಋತುಚಕ್ರದ ಅವಧಿ ಸೇರಿದಂತೆ ನಿವಾಸಿಗಳಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳನ್ನೂ ದಾಖಲಿಸುತ್ತಾರೆ. ಬೆಳಿಗ್ಗೆ ಪ್ರಾರ್ಥನೆಯಿಂದ ರಾತ್ರಿ ಊಟದವರೆಗೂ ಎಲ್ಲಕ್ಕೂ ಸಮಯ ನಿಗದಿ. ಆ ಪ್ರಕಾರವೇ ಎಲ್ಲ ಚಟುವಟಿಕೆಗಳು ನಡೆಯುತ್ತವೆ.

‘ಬುದ್ಧಿಮಾಂದ್ಯರನ್ನು ನಿರ್ವಹಿಸಬಹುದು. ಆದರೆ, ಬಹು ಅಂಗವೈಕಲ್ಯವಿರುವವರನ್ನು, ಆಗಾಗ್ಗೆ ಮೂಡ್ ಸ್ವಿಂಗ್ ಆಗುವ ಮಾನಸಿಕ ಅಸ್ವಸ್ಥರನ್ನು ನಿರ್ವಹಿಸುವುದು ಬಹುದೊಡ್ಡ ಸವಾಲು’ ಎನ್ನುತ್ತಾರೆ ಬುಜ್ಜಿ.

## ಬದಲಾವಣೆಯ ಬೆಳಕು

ಆಶ್ರಯಕ್ಕಾಗಿ ಆಶ್ರಮಕ್ಕೆ ಬಂದವರಲ್ಲಿ ಗುಣಮುಖರಾದವರ ಸಂಖ್ಯೆ ಬೆರಳೆಣಿಕೆಯಷ್ಟು. ಹಿಂದಿರುಗಿ ಹೋದವರ ಸಂಖ್ಯೆಯೂ ವಿರಳ. ಆದರೆ, ಅನಾಥರಾಗಿ ಆಶ್ರಮ ಸೇರಿದವರಲ್ಲಿ ಕೆಲವರ ಆರೋಗ್ಯ ಸುಧಾರಣೆಯಾಗಿ ಇಲ್ಲೇ ಜೀವನ ಮುಂದುವರಿಸಿದ್ದಾರೆ. ಕೆಲವರು ಆಶ್ರಮದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಟಿಟಡಿಯಿಂದ 9 ತಿಂಗಳ ಹಸುಗೂಸಾಗಿ ಆಶ್ರಮಕ್ಕೆ ಬಂದ ಶ್ರೀಲಕ್ಷ್ಮಿಗೆ (ಆಶ್ರಮದವರೇ ಇಟ್ಟ



ಆಟದೊಂದಿಗೆ ಪಾಠ